40th Year of Publication. Phone: 3728.

ವಾರ್ಷಿಕ ಚಂದಾ
ರೂ. 12—50.

ಪ್ರಭಾತ

ಬೆಲೆ
20
ಪೈಸೆ.

ಸಂಪುಟ: ೪೦. ಸಂಚಿಕೆ: ೩೬. | ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ರವಿವಾರ ತಾ. 13—10—1974 | VOL. 40. No. 36.

ಜಿಲ್ಲಾ ಕೊಂಗ್ರೆಸ್ ಸಮಿತಿಗೆ ಹೊಸ ಅಧ್ಯಕ್ಷರು

ದ. ಕ. ಜಿಲ್ಲಾ ಕೊಂಗ್ರೆಸ್ ಸಮಿತಿ ಅಧ್ಯಕ್ಷತೆಗೆ ಶ್ರೀ| ಕೆ. ಎನ್. ಮಹಾಬಲ ಶೆಟ್ಟರು ರಾಜೀನಾಮೆ ನೀಡಿರುವುದನ್ನು ಕೆ. ಪಿ. ಸಿ. ಸಿ. ಅಧ್ಯಕ್ಷ ಶ್ರೀ| ಎಚ್. ಕೆ. ರಂಗನಾಥರು ಪ್ರಕಟಿಸಿದ ಬೆನ್ನಲ್ಲೇ, ತಾ. 6ರಂದು ಮಂಗಳೂರು ಕಾರ್ನಾಡ್ ಸದಾಶಿವರಾವ್ ಸ್ಮಾರಕ ಮಂದಿರದಲ್ಲಿ ನಡೆದ ಜಿಲ್ಲಾ ಕೊಂಗ್ರೆಸ್ ಸಮಿತಿಯ ವಿಶೇಷ ಸಭೆಯೊಂದರಲ್ಲಿ ಜಿಲ್ಲಾ ಕೊಂಗ್ರೆಸ್ ಸಮಿತಿಯ ಒಟ್ಟು 106 ಮಂದಿ ಸದಸ್ಯರಲ್ಲಿ 92 ಮಂದಿ ಹಾಜರಿದ್ದು, ಸಂಸತ್ ಸದಸ್ಯ ಶ್ರೀ| ಕೆ. ಕೆ. ಸೆಟ್ಟಿಯವರನ್ನು ಸರ್ವಾನುಮತದಿಂದ ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಶಾಸಕ ಶ್ರೀ| ಬಿ. ನಾರಾಯಣ ನಾಯಕ್‌ರವರು ಶ್ರೀ| ಸೆಟ್ಟಿಯವರ ಹೆಸರನ್ನು ಸೂಚಿಸಿ ಶ್ರೀಮತಿ ಒಕ್ಕೇವಿಯಾ ಅಲ್ವಾರಿಸ್ ಅದನ್ನು ಅನುಮೋದಿಸಿದ್ದರು. ಶಾಸಕ ಶ್ರೀ| ಎ. ಜಿ. ಕೊಡ್ಗಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ವೀಕ್ಷಕರಾಗಲು ಬೆಂಗಳೂರಿಂದ ಕೆ. ಪಿ. ಸಿ. ಸಿ. ಪ್ರಧಾನ ಕಾರ್ಯದರ್ಶಿ ಶ್ರೀ| ಪುಟ್ಟುದಾಸರು ಆಗಮಿಸಿದ್ದರು. ಕಾರ್ಯಕಾರಿ ಸಮಿತಿಯ ಇತರ ಅಧಿಕಾರಿಗಳನ್ನು ಆರಿಸುವ ಹೊಣೆಗಾರಿಕೆ ಅಧ್ಯಕ್ಷರಿಗೇ ಬಿಟ್ಟುಕೊಡಲಾಯಿತು.

ದ. ಕ. ಜಿಲ್ಲಾ ಕೊಂಗ್ರೆಸ್ಸಿಗೆ ಹೊಸ ಅಧ್ಯಕ್ಷರನ್ನಾರಿಸುವ ಕಾರ್ಯಕ್ರಮ ವಿಶೇಷ ಸಭೆಯ ಪಟ್ಟಿಯಲ್ಲಿ ಸೇರಿರಲಿಲ್ಲ, ಜಿಲ್ಲಾ ರಿಟರ್ನಿಂಗ್ ಆಫೀಸರರ ಗೈರುಹಾಜರಿಯಲ್ಲಿ ನಡೆದ ಅಧ್ಯಕ್ಷರ ಚುನಾವಣೆ ನ್ಯಾಯಬಾಹಿರ ಹಾಗು ತಾವು ಇದಕ್ಕೆ ಬದ್ಧರಾಗಿಲ್ಲ ಎಂದು ಕರ್ನಾಟಕ ರಾಜ್ಯ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಅಡ್ಡಿ ಸಲ್ವಾಡಾ ಸಹಿತ 17 ಮಂದಿ ಕೊಂಗ್ರೆಸ್ ಸದಸ್ಯರು ಹೋಗಿ ಅಧ್ಯಕ್ಷರಾಯ್ಕೆಗೆ ಪ್ರತಿಭಟನೆ ಸಲ್ಲಿಸಿರುವರಾಗಿ ತಿಳಿದುಬರುತ್ತದೆ.

ಎನೇಸ್ಥೇಟಿಸ್ಟರ ಸಮ್ಮೇಳನ

ಇಂಡಿಯನ್ ಸೊಸೈಟಿ ಆಫ್ ಎನೇಸ್ಥೇಟಿಸ್ಟ್ಸ್ ಇದರ ಕರ್ನಾಟಕ ರಾಜ್ಯ ಶಾಖೆಯ ದ್ವಿತೀಯ ಸಮ್ಮೇಳನ ಮಂಗಳೂರು ಕಸ್ತೂರ್‌ಬಾ ಮೆಡಿಕಲ್ ಕೊಲೇಜಿನಲ್ಲಿ ತಾ. 6 ಮತ್ತು 7ರಂದು ನಡೆಯಿತು. ೬0ಕ್ಕೂ ಮಿಕ್ಕಿ ಎನೇಸ್ಥೇಟಿಸ್ಟ್ (ನೋವು ನಿವಾರಕ ಪರಿಣತರು) ಇದರಲ್ಲಿ ಭಾಗವಹಿಸಿದ್ದರು.

ಯುವ ಚಟುವಟಿಕೆ ಸಪ್ತಾಹ

ಮಂಗಳೂರು ರೋಟರಿ ಕ್ಲಬ್ ಸಾಪ್ತಾಹಿಕ ಸಭೆಯು ತಾ. 10ರಂದು ಮೋತಿಮಹಲಿನಲ್ಲಿ ಕ್ಲಬ್ಬಿನ ಅಧ್ಯಕ್ಷ ಡಾ| ಕೆ. ಎಸ್. ಪ್ರಭಾಕರರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಯುವ ಚಟುವಟಿಕೆ ಸಪ್ತಾಹ ಕಾರ್ಯಕ್ರಮ ಆಚರಿಸಲಾಯಿತು. ಕೆನಿಯಾ, ದಕ್ಷಿಣ ಆಫ್ರಿಕಾ, ಮಲೇಸಿಯಾ, ಹೊಂಗ್‌ಕೊಂಗ್ ವಿದ್ಯಾರ್ಥಿಗಳು ತಂತಮ್ಮ ದೇಶಗಳ ಬಗ್ಗೆ ಮಾಹಿತಿ ನೀಡಿ ಭಾಷಣಮಾಡಿದರು. ರಷ್ಯನ್ ಬ್ಯಾಲೆ ನೃತ್ಯ, ಸಂಗೀತ, ಮಯೂಣಟಿ ಡ್ಯಾನ್ಸ್ ಮೊದಲಾದ ಮನರಂಜನಾ ಕಾರ್ಯಕ್ರಮಗಳು ಯುವ ವಿದ್ಯಾರ್ಥಿನಿಯರಿಂದ ನಡೆದುವು. ಆರಂಭದಲ್ಲಿ ಅಧ್ಯಕ್ಷರಿಂದ ಸ್ವಾಗತ ಮತ್ತು ಅಂತ್ಯದಲ್ಲಿ ಡಾ| ಮೋಹನದಾಸ ನಾಯ್ಕರಿಂದ ಧನ್ಯವಾದಾರ್ಪಣೆಗಳು ನಡೆದುವು.

ಮಂಗಳೂರಲ್ಲಿ ಎಲ್. ಐ. ಸಿ. ಯ ಎರಡನೆ ಶಾಖೆ

ಮಂಗಳೂರು ಹಂಪನಕಟ್ಟೆಯ ಕೆಥೊಲಿಕ್ ಕ್ಲಬ್ಬಿನ ಎರಡನೇ ಉಪ್ಪರಿಗೆಯಲ್ಲಿ ಜೀವವಿಮಾ ಕೊರ್ಪೊರೇಶನಿನ ದ್ವಿತೀಯ ಶಾಖೆ (ಮಂಗಳೂರಲ್ಲಿ)ಯನ್ನು ಕೇಂದ್ರ ಸಚಿವ ಶ್ರೀ| ಟಿ. ಎ. ಪೈಯವರು ತಾ. 6ರಂದು ಮಧ್ಯಾಹ್ನ ಉದ್ಘಾಟಿಸಿದರು. ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಅತ್ಯಂತ ಸಹಕಾರಿಯಾದ ಜೀವವಿಮಾ ಕ್ಷೇತ್ರವನ್ನು ಇನ್ನೂ ವಿಕಾಸಗೊಳಿಸುವುದರ ಕಡೆಗೆ ಏಜಂಟರೂ, ಅಧಿಕಾರಿಗಳೂ, ಇನ್ನಿತರರೂ ಶ್ರಮಿಸಬೇಕೆಂದು ಶ್ರೀ| ಪೈಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕರೆಯಿತ್ತರು. ೫ ಲಕ್ಷಕ್ಕೂ ಮಿಕ್ಕಿ ವ್ಯವಹಾರಮಾಡಿದ 13 ಏಜಂಟರಿಗೆ ಮತ್ತು ಎಲ್. ಐ. ಸಿ. ಟೇಬಲ್ ಟೆನ್ನಿಸ್ ಪಂದ್ಯದಲ್ಲಿ ಪ್ರಶಸ್ತಿ ಗಳಿಸಿದವರಿಗೆ ಈ ಸಂದರ್ಭದಲ್ಲಿ ಶ್ರೀ| ಪೈಯವರ ಹಸ್ತದಿಂದ ಬಹುಮಾನವಿತರಣೆಗೈಯಲಾಯಿತು. ಡಿವಿಜನಲ್ ಮೆನೇಜರ್ ಶ್ರೀ| ಎನ್. ಎ. ಪರಮೇಶ್ವರನ್ ಆರಂಭದಲ್ಲಿ ಸ್ವಾಗತಿಸಿ, ಕೊನೆಯಲ್ಲಿ ಸೀನಿಯರ್ ಬ್ರಾಂಚ್ ಮೆನೇಜರ್ ಶ್ರೀ| ಎನ್. ಎಸ್. ಗೋಪಾಲಕೃಷ್ಣನ್ ಧನ್ಯವಾದ ಅರ್ಪಿಸಿದ್ದರು.

ಮಂಗಳೂರು ನೊರ್ತ್ ರೋಟರಿ ಕ್ಲಬ್

ಮೇಲಿನ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಅಧ್ಯಕ್ಷ ಎಂ. ವಿ. ಭಂಡಾರ್ಕಾರ್ ಅವರ ಅಧ್ಯಕ್ಷತೆಯಲ್ಲಿ ತಾ. 8ರಂದು ಹಿಂದಿ ಪ್ರಚಾರ ಸಮಿತಿ ಭವನದಲ್ಲಿ ಜರಗಿದಾಗ ಕುಮಾರಿ ಕೆ. ಎನ್. ಕೆ. ಶಾಸ್ತ್ರಿಯಾನಿ, ಸೀನಿಯರ್ ಸುಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸಸ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ 'ಪೋಸ್ಟ್ ಆಫೀಸ್' ಅಹರ್ನಿಶಾ ಸೇವಾ ಮಹೇ ಎಂಬ ವಿಷಯದ ಕುರಿತು, ಅಂಚೆಕಚೇರಿಯು ದಿನದ ಇಪ್ಪತ್ತನಾಲ್ಕು ತಾಸುಗಳಲ್ಲಿಯೂ ಎಡೆಬಿಡದೆ ನಡೆಸುತ್ತಿರುವ ಜನೋಪಯೋಗಿ ಸೇವೆಯ ಕುರಿತು ವಿವರಿಸಿ ಭಾಷಣಮಾಡಿದ್ದರು. ಆರಂಭದಲ್ಲಿ ರೊಟೇರಿಯನ್ ನಗರ ರಾಮಚಂದ್ರ ರಾವ್‌ರವರಿಂದ ಪ್ರಾರ್ಥನೆ, ಅಧ್ಯಕ್ಷರಿಂದ ಸ್ವಾಗತ, ರೊಟೇರಿಯನ್ ಡಾ| ವಿ. ಆರ್. ಭಟ್ಟರಿಂದ ಮುಖ್ಯ ಅತಿಥಿಗಳ ಪರಿಚಯ ಭಾಷಣ ನಡೆದಿತ್ತು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ| ಕಸ್ತೂರಿ ವೈಕುಂಠ ಪೈಯವರಿಂದ ಪ್ರಕಟಣೆಗಳು ಮತ್ತು ಶ್ರೀ| ಕೆ. ಆರ್. ಕಾರಂತರಿಂದ ಧನ್ಯವಾದಾರ್ಪಣೆ ನಡೆಯಿತು.

ನೆರೆಪೀಡಿತರಿಗೆ ಪುನರ್ವಸತಿ ನೆರವು

ದಕ್ಷಿಣ ಕನ್ನಡ ಜಿಲ್ಲೆಯ ನೆರೆಪೀಡಿತರಿಗೆ ಪುನರ್ವಸತಿಗಳನ್ನು ನಿರ್ಮಿಸುವ ಬಗ್ಗೆ ಈಗಾಗಲೇ ವ್ಯವಸ್ಥಿತ ಯೋಜನೆಯೊಂದನ್ನು ರೂಪಿಸಲಾಗಿದ್ದು, ಮುಂದಿನ ಹತ್ತು ದಿನಗಳೊಳಗೆ ಜಿಲ್ಲೆಯ 2800 ನಿರ್ವಾಸಿತರಿಗೆ ಆಯಾಯ ತಾಲೂಕುಗಳ ತಹಸಿಲ್ದಾರರ ಮೂಲಕ ಪುನರ್ವಸತಿ ನೆರವು ದೊರೆಯುವಂತೆ ಮಾಡಲು ಜಿಲ್ಲಾಧಿಕಾರಿಗಳ ಮೂಲಕ ಆದೇಶನೀಡಲಾಗುವುದೆಂದು ಕೇಂದ್ರ, ಘನೋದ್ದಿಮೆ ಸಚಿವ ಶ್ರೀ| ಟಿ. ಎ. ಪೈಯವರು ತಾ. 6ರಂದು ಮಂಗಳೂರಲ್ಲಿ ಪತ್ರಕರ್ತರಿಗೆ ತಿಳಿಸಿರುವರು. ನೆರೆಪೀಡಿತ ಪ್ರದೇಶದಲ್ಲಿ ಕೆಲವರು ಈಗಾಗಲೇ ತಮ್ಮ ಮನೆಗಳನ್ನು ಕಟ್ಟಲು ಪ್ರಾರಂಭಿಸಿದ್ದು, ಅವರಿಗೆ ತಲಾ ಹತ್ತು ಗೋಣಿ ಸಿಮೆಂಟು ನೀಡಲಾಗುವುದು; ಅವರ ಬೇಡಿಕೆ ವಿಮರ್ಶಿಸಿ ಅಧಿಕ ಸಿಮೆಂಟು ನೀಡಲಾಗುವುದೆಂದೂ ಮಳೆಗಾಲದ ಸಮಯದಲ್ಲಿ ಮನೆ ದುರುಸ್ತಿಗೆ ಇತರರಿಗೂ ೫ ಗೋಣಿ ಸಿಮೆಂಟು ನೀಡಲು ಜಿಲ್ಲಾಧಿಕಾರಿಗಳು ಒಪ್ಪಿರುವರೆಂದೂ ಶ್ರೀ| ಪೈ ತಿಳಿಸಿರುತ್ತಾರೆ.

ಅಧ್ಯಕ್ಷ ಆಯ್ಕೆ ಸಿಂಧುತ್ವ ಪ್ರಶ್ನಿಸಿ ಮೊಕದ್ದಮೆ

ಕಳೆದ ತಾ. 6ರಂದು ಸೇರಿದ ಜಿಲ್ಲಾ ಕೊಂಗ್ರೆಸ್ ಸಮಿತಿ ಸಭೆಯು ಶ್ರೀ| ಕೆ. ಕೆ. ಸೆಟ್ಟರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದುದರ ಸಿಂಧುತ್ವ ಪ್ರಶ್ನಿಸಿ ಶ್ರೀ| ವಿಠಲ ಸಾಲ್ಯಾನ್ ಮತ್ತು ಶ್ರೀ| ಶ್ರೀನಿವಾಸ ನ್ಯಾಕ್ ಎಂಬವರು ಮಂಗಳೂರು ಮುನ್ಸಿಫ್ ಕೋರ್ಟಿನಲ್ಲಿ ಮೊಕದ್ದಮೆ ದಾಖಲುಮಾಡಿರುವರಾಗಿ ಕೇಳಿಬರುತ್ತದೆ.

— —

ಮರೆಯಲಾಗದ ಮೈಸೂರು ಮಹಾರಾಜರು

"ಕರ್ಣಾಟಕದಲ್ಲಿ ಹುಟ್ಟಿದ ರಾಜರುಗಳಲ್ಲಿ ಅಪೂರ್ವವಾದ ಗುಣಸಂಪತ್ತುಳ್ಳವರಾಗಿದ್ದರು."

● ಬಿ. ಶಿವಮೂರ್ತಿ ಶಾಸ್ತ್ರೀ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಶ್ರೀ ಜಯಚಾಮರಾಜ ಒಡೆಯರು ಕನ್ನಡನಾಡು ನುಡಿಗಳ ಹಿರಿಯ ಅಭಿಮಾನಿಗಳು. ಕರ್ಣಾಟಕ ಏಕೀಕರಣಕ್ಕೆ ತಮ್ಮ ಪೂರ್ಣ ಬೆಂಬಲವನ್ನು ಕೊಟ್ಟಿದ್ದಾರೆ. ಫಜಲಾಲಿ ಕಮಿಷನ್ ಮುಂದೆ (1955) ನಮ್ಮ ರಾಜಪದವಿ ಹೋದರೂ ಚಿಂತೆಯಿಲ್ಲ, ಮೂರು ಕೋಟಿ ಕನ್ನಡಿಗರು ಒಂದಾಗಲಿ, ಮುಂದಾಗಲಿ, ಕರ್ಣಾಟಕ ಏಕೀಕರಣವಾಗಲಿ ನಮ್ಮ ರಾಜ್ಯಕ್ಕೆ ಅನ್ವರ್ಥವಾದ ಕರ್ಣಾಟಕವೆಂಬ ಹೆಸರಾಗಲಿ ಎಂದು ಸಾಕ್ಷಿಯನ್ನು ಕೊಟ್ಟಿದ್ದಾರೆ. ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ ಪದವಿಯಿಂದ ಇಳಿದು ಕನ್ನಡಿಗರ ಹೃದಯ ಸಿಂಹಾಸನದ ಅಧಿದೇವತೆಯಾಗಿ ರಾರಾಜಿಸುತ್ತಿದ್ದಾರೆ.

ಎಂದೂ ಮರೆಯಲಾಗದಂಥ ನಮ್ಮ ಮಹಾರಾಜ ಜಯಚಾಮರಾಜ ಒಡೆಯರು ನಿಜಕ್ಕೂ ಮಹಾಪುರುಷರು. ಅರಮನೆಯಲ್ಲಿ ನಡೆದ ಒಡ್ಡೋಲಗ, ಮೈಸೂರಿನಲ್ಲಿ ನಡೆದ ಜಂಬೂಸವಾರಿ, ಇವುಗಳ ವೈಭವವನ್ನು ಕಣ್ಣಾರೆ ನೋಡಿದವರು ಪ್ರಪಂಚದಲ್ಲಿ ಅಂತಹ ದಿವ್ಯ ಭವ್ಯ ದೃಶ್ಯವನ್ನು ಇನ್ನು ಎಂದೂ ಎಲ್ಲೂ ಕಾಣಲಾರರು. ಶ್ರೀ ಜಯಚಾಮರಾಜ ಒಡೆಯರು ದಾರ್ಶನಿಕರು. ಅದರಲ್ಲೂ ಶಿವಾದ್ವೈತಿಗಳು. ವಿಭೂತಿ, ರುದ್ರಾಕ್ಷಿಗಳಲ್ಲಿ ನಿಷ್ಠೆಯುಳ್ಳವರು. ಇಷ್ಟಲಿಂಗಾಪೂಜಾಲೋಲರು. ಅವರು ತ್ರಿಕಾಲ ಪೂಜೆಯನ್ನು ಮಾಡುತಿದ್ದರು. ಭಾರತ ಸಂಗೀತ ಅಕಾಡೆಮಿ, ಬೆಂಗಳೂರು ಬಸವ ಸಮಿತಿ ಮೊದಲಾದವುಗಳಿಗೆ ಅಧ್ಯಕ್ಷರಾಗಿದ್ದರು. ಕಾಶಿ ಹಿಂದೂವಿಶ್ವವಿದ್ಯಾಲಯವು ನಮ್ಮ ಮಹಾರಾಜರಿಗೆ ಡಾಕ್ಟರೇಟ್ ಪದವಿ ಕೊಟ್ಟು ಗೌರವಿಸಿತು. 1955ರಲ್ಲಿ ಬಸವಕಲ್ಯಾಣದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಉದ್ಘಾಟಿಸಿ ಅತ್ಯಮೂಲ್ಯವಾದ ಭಾಷಣವನ್ನು ಮಾಡಿದರು. ಇಂತಹ ಮಹಾನುಭಾವರಾದ ಜಯಚಾಮರಾಜ ಒಡೆಯರನ್ನು ಕಳೆದುಕೊಂಡ ಕರ್ಣಾಟಕವು ತುಂಬ ನಷ್ಟಕ್ಕೆ ಈಡಾಗಿದೆ. ಈ ನಷ್ಟವು ಅಖಿಲ ಭಾರತಕ್ಕೂ ಕೂಡ ಎಂದು ಹೇಳಬಹುದು. ನಾನು ನನ್ನ ಜೀವಮಾನದಲ್ಲಿ ಅನೇಕ ಸಂದರ್ಭಗಳಲ್ಲಿ ಶ್ರೀಮನ್ಮಹಾರಾಜರವರ ಸಂಗಡ ಪ್ರವಾಸಮಾಡಿದ್ದೇನೆ. ಅವರ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಅವರಲ್ಲಿ ಹಲವಾರು ಬಾರಿ ಮಾತನಾಡಿದ್ದೇನೆ. ಇವೆಲ್ಲದರ ಪರಿಣಾಮವಾಗಿ ಅವರ ಪ್ರಭಾವಮುದ್ರೆ ನನ್ನ ಮನಸ್ಸಿನಲ್ಲಿ ಉಂಟಾಗಿದೆಯೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಅವರು ನಮ್ಮ ಶರಣ ಸಾಹಿತ್ಯಕ್ಕೆ ಮಹಾಪೋಷಕರಾಗಿದ್ದರು. ಮಹಾಜನರು ನನಗೆ ಒಪ್ಪಿಸಿದ "ದೇವಗಂಗೆ" ಎಂಬ ಗ್ರಂಥಕ್ಕೆ ನಮ್ಮ ಮಹಾರಾಜರು ಪ್ರಸ್ತಾವನೆಯನ್ನು ಬರೆದು ನನ್ನನ್ನು ಅನುಗ್ರಹಿಸಿದರು. ನನಗೆ 'ಆಸ್ಥಾನ ವಿದ್ವಾನ್' ಪದವಿಯನ್ನೂ 'ಪಂಡಿತರತ್ನಂ' ಎಂಬ ಬಿರುದನ್ನೂ, ಕೊಟ್ಟು ವಿಶೇಷವಾದ ಅನುಗ್ರಹವನ್ನು ತೋರಿಸಿದರು. ಆದುದರಿಂದ ನಾನು ನಮ್ಮ ಮಹಾರಾಜರ ವಿಷಯದಲ್ಲಿ ಕೃತಜ್ಞತೆಯುಳ್ಳವನಾಗಿದ್ದೇನೆ.

'ಜಾತಸ್ಯ ಮರಣಂ ಧ್ರುವಂ' ಎಂಬ ಶಾಸ್ತ್ರವಾಕ್ಯದಂತೆ ಹುಟ್ಟಿದವರು ಸಾಯಲೇಬೇಕಾದುದು ಅನಿವಾರ್ಯ. ಪ್ರಪಂಚದಲ್ಲಿ ಇದುವರೆವಿಗೂ ಹುಟ್ಟಿದವರೆಲ್ಲರೂ ಬದುಕಿದ್ದರೆ ಜನಗಳ ಗತಿ ಇಂದು ಏನಾಗುತಿತ್ತು ಎಂಬುದನ್ನು ಯೋಚಿಸಿನೋಡಬಹುದು. ಸೃಷ್ಟಿಕರ್ತನು ಪ್ರಪಂಚದ ಪ್ರಗತಿಗಾಗಿಯೇ ಈ ಮರಣವನ್ನು ನಿಯಾಮಕ ಮಾಡಿದ್ದಾನೆ ಎಂಬುದು ನಮ್ಮ ದುಃಖಕ್ಕೆ ಸಮಾಧಾನ. ಮರಣವೇ ಮಹಾನವಮಿ ಎಂದು ಬಸವಣ್ಣನವರು ಹೇಳಿರುವುದರಲ್ಲಿ ತುಂಬ ಅರ್ಥವಿದೆ. ಈಶ್ವರೇಚ್ಛೆಗೆ ಉಪಾಯವಿಲ್ಲ. ಮರೆಯಲಾಗದ ನಮ್ಮ ಮಹಾರಾಜರು ನಮ್ಮನ್ನು ಅಗಲಿ ಹೋಗಿದ್ದಾರೆ. ಆದರೆ ಅವರ ಶ್ರೇಷ್ಠವಾದ ಆದರ್ಶಗಳೂ ಘನವಾದ ಜೀವನೋದ್ದೇಶಗಳೂ ನಮ್ಮ ಕಣ್ಣ ಮುಂದೆ ನಿಂತಿವೆ. ಆ ಮಹಾಪ್ರಭುಗಳಿಗೆ ಯೋಗ್ಯ ಸ್ಮಾರಕವನ್ನು ಮಾಡುವುದು ನಮ್ಮ ಸರ್ಕಾರದ ಹಾಗೂ ಜನತೆಯ ಕರ್ತವ್ಯವಾಗಿದೆ. ಮೈಸೂರು ಮತ್ತು ಬೆಂಗಳೂರು ಅರಮನೆಗಳು ಅವರ ಸ್ಮಾರಕವಾಗಿ ಇರಲಿ ಎಂಬುದು ಬಹುಜನರ ಆಸೆ. ಪರಮೇಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೂ ದುಃಖಕ್ಕೆ ಈಡಾಗಿರುವ ಅವರ ರಾಜಕುಟುಂಬ ವರ್ಗದವರ ಮನಸ್ಸಿಗೆ ಸಮಾಧಾನವನ್ನೂ ಉಂಟುಮಾಡಲೆಂದು ನಾನು ಪರಮೇಶ್ವರನನ್ನು ಕುರಿತು ಪ್ರಾರ್ಥಿಸುತ್ತೇನೆ.

——

ಕುದುರೆಮುಖ ಯೋಜನೆಗೆ ಇರಾನಿನ ನೆರವು

ಇರಾನಿಗೆ ಭಾರತದಿಂದ ಉಕ್ಕು, ಸಿಮೆಂಟ್, ಸಕ್ಕರೆ ಮತ್ತು ಅಕ್ಕಿ

ಕರ್ನಾಟಕದ ಕುದುರೆಮುಖ ಕಬ್ಬಿಣ ಅದಿರು ಕಾರ್ಯಯೋಜನೆ ವಾರ್ಷಿಕ ಉತ್ಪಾದನಾ ಸಾಮರ್ಥ್ಯವನ್ನು 7.5 ದಶ ಲಕ್ಷ ಮೆಟ್ರಿಕ್ ಟನ್‌ಗಳಿಗೆ (ಕಬ್ಬಿಣದ ತುಣುಕುಗಳನ್ನು) ಏರಿಸಲು ಇರಾನ್ ಮುಂದೆ ಬಂದಿದೆ. ಈ ಕಬ್ಬಿಣದ ತುಣುಕುಗಳನ್ನು ಇರಾನ್ ತನ್ನ ಉಕ್ಕಿನ ಕೈಗಾರಿಕೆಗಾಗಿ ಉಪಯೋಗಿಸಿಕೊಳ್ಳಲಿದ್ದು, ಈ ಕಾರ್ಯ ಯೋಜನೆಯ ವೆಚ್ಚ ನಿಭಾಯಿಸಲು ಸಾಲ ಸೌಕರ್ಯ ನೀಡಲು ಇರಾನ್ ಸಮ್ಮತಿಸಿದೆ. ಇದಲ್ಲದೇ, ಸುಮಾರು ಮೂರು ಲಕ್ಷ ಮೆಟ್ರಿಕ್ ಟನ್‌ಗಳಷ್ಟು ವಾರ್ಷಿಕ ಉತ್ಪಾದನಾ ಸಾಮರ್ಥ್ಯವುಳ್ಳ, ಅಲ್ಯೂಮಿನಿಯಂ ಕಾರ್ಖಾನೆಯನ್ನು ಸ್ಥಾಪಿಸಲು ಇರಾನ್ ಅಗತ್ಯವಾದ ಹಣ ಕಾಸಿನ ನೆರವನ್ನು—ಸಾಲ ಹಾಗೂ ಇಕ್ವಿಟಿ ಷೇರ್ ಮೂಲಕ ಒದಗಿಸಲಿದೆ. ಇದೂ ಅಲ್ಲದೇ ಭಾರತ ಇರಾನ್ ದೇಶಗಳು— "ಇರಾನೊ—ಹಿಂದ್ ಹಡಗುಸಾರಿಗೆ ಸಂಸ್ಥೆ"ಯ ಸ್ಥಾಪನೆಗೆ ಸಮ್ಮತಿಸಿವೆ.

ಈ ಕಂಪೆನಿಯ ಹಡಗುಗಳು ಎರಡೂ ದೇಶಗಳ ಪಡುವೆ ಸಾರಿಗೆ ನಿರ್ವಹಿಸಲಿವೆ.

ಇರಾನಿನ ಈ ಸಹಕಾರಕ್ಕೆ ಪ್ರತಿಯಾಗಿ ಭಾರತ, ಇರಾನಿಗೆ 1.3 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಉಕ್ಕಿನ ಕಂಬಿಗಳನ್ನೂ, ಮೂರು ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಸಿಮೆಂಟನ್ನೂ, ಐದು ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಸಕ್ಕರೆಯನ್ನೂ ರಫ್ತು ಮಾಡಲು ಒಪ್ಪಿಕೊಂಡಿದೆ. ಇದೂ ಅಲ್ಲದೇ, ಪ್ರತಿವರ್ಷ ಸುಮಾರು 25000 ಮೆಟ್ರಿಕ್ ಟನ್‌ಗಳಷ್ಟು ಬಾಸುಮತಿ ಅಕ್ಕಿಯನ್ನು ಮತ್ತು ಸೆಣಬಿನ ಚೀಲಗಳನ್ನು ಸರಬರಾಜು ಮಾಡಲಿದೆ. ಪರ್ಶಿಯನ್ ಖಾರಿಯಲ್ಲಿ ಹಾಗೂ ಹಿಂದೂ ಮಹಾಸಾಗರದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು, ಭಾರತ ಹತ್ತು ಯಂತ್ರ ಸಜ್ಜಿತ ದೋಣಿಗಳನ್ನೂ ನೀಡಲಿದೆ. ಇರಾನಿಗೆ ಸರ್ವೇಕ್ಷಣ ಹಡಗುಗಳ ಮಾರಾಟ ಇರಾನಿನ ಸಿಬ್ಬಂದಿಗೆ ಭಾರತದಲ್ಲಿ ತರಬೇತಿ ನೀಡಿಕೆ ಈ ಕಾರ್ಯಕ್ರಮದಲ್ಲಿ ಸೇರಿವೆ.

1964–65ರಿಂದ 1974–75ರ ವರೆಗಿನ ದಶಕದಲ್ಲಿ ಎರಡೂ ದೇಶಗಳ ನಡುವಣ ವ್ಯಾಪಾರ ಗಣನೀಯವಾಗಿ ಹೆಚ್ಚಿದೆ.

ಭಾರತವು ಇರಾನಿನಿಂದ ಮುಖ್ಯವಾಗಿ ಎಣ್ಣೆಯನ್ನು ಆಮದುಮಾಡಿಕೊಂಡಿದೆ. ಇರಾನಿ ಭಾರತಕ್ಕೆ ಮಾರಿರುವ ರಫ್ತಿನಲ್ಲಿ ನೂರಕ್ಕೆ ಸುಮಾರು 90ರಷ್ಟು ಎಣ್ಣೆ ಹಾಗೂ ಪೆಟ್ರೋಲಿಯಂ ಉತ್ಪನ್ನಗಳಿವೆ. ಒಣಗಿದ ಹಾಗೂ ತಾಜಾ ಹಣ್ಣುಗಳೂ ಇರಾನಿನಿಂದ ಬರುತ್ತಿವೆ.

ಇದಕ್ಕೂ ಪ್ರತಿಯಾಗಿ ಭಾರತ ಇರಾನಿಗೆ ಚಹಾ, ಸೆಣಬು, ಸಾಂಬಾರ ಪದಾರ್ಥಗಳು, ಮತ್ತಿತರ ವಸ್ತುಗಳನ್ನು ರಫ್ತು ಮಾಡುತ್ತಿದೆ. ಇರಾನ್ ಆಮದು ಮಾಡಿಕೊಳ್ಳುತ್ತಿರುವ ಸರಕುಗಳು ಒಟ್ಟು ಮೊತ್ತದ ಶೇ. 2ರಷ್ಟು ಭಾರತದ ವಸ್ತುಗಳಿವೆ.

——

ಕೇಂದ್ರಸಂಪುಟ ಪುನಾರಚನೆ

ಪ್ರಧಾನ ಸಚಿವೆ ಶ್ರೀಮತಿ ಇಂದಿರಾಗಾಂಧಿಯವರು ಪುನರ್ರಚಿಸಿದ ಕೇಂದ್ರ ಸಂಪುಟದ ವಿವರ ಈ ಕೆಳಗಿನಂತಿದೆ:

ಕ್ಯಾಬಿನೆಟ್ ಸಚಿವರು

1. ಶ್ರೀಮತಿ ಇಂದಿರಾಗಾಂಧಿ .... ಪ್ರಧಾನಿ, ಅಣುಶಕ್ತಿ ಮತ್ತು ಬಾಹ್ಯಾಕಾಶ
2. ಶ್ರೀ| ಜಗಜೀವನರಾವ್ .... ಕೃಷಿ ಮತ್ತು ನೀರಾವರಿ
3. ಶ್ರೀ| ವೈ. ಬಿ. ಚವಾಣ್ .... ವಿದೇಶ ವ್ಯವಹಾರ
4. ಶ್ರೀ| ಸ್ವರಣ್‌ಸಿಂಗ್ .... ರಕ್ಷಣೆ
5. ಶ್ರೀ| ಸಿ. ಸುಬ್ರಹ್ಮಣ್ಯಂ .... ಅರ್ಥ
6. ಶ್ರೀ| ಕೆ. ಬ್ರಹ್ಮಾನಂದ ರೆಡ್ಡಿ .... ಗೃಹ
7. ಶ್ರೀ| ಉಮಾಶಂಕರ ದೀಕ್ಷಿತ್ .... ಖಾತೆರಹಿತ
8. ಶ್ರೀ| ಎಲ್. ಎನ್. ಮಿಶ್ರಾ .... ರೈಲ್ವೇ
9 ಶ್ರೀ| ಡಿ. ಪಿ. ಧರ್ .... ಯೋಜನೆ
10. ಶ್ರೀ| ಎಚ್. ಆರ್. ಗೋಖಲೆ.... ಕಾನೂನು ಮತ್ತು ಕಂಪೆನಿ ವ್ಯವಹಾರ
11. ಶ್ರೀ| ಕೆ. ಡಿ. ಮಾಲವೀಯ .... ಪೆಟ್ರೋಲಿಯಂ ಮತ್ತು ರಾಸಾಯನಿಕ
12. ಶ್ರೀ| ಟಿ. ಎ. ಪೈ .... ಕೈಗಾರಿಕೆ ಮತ್ತು ನಾಗರಿಕ ಪೂರೈಕೆ ಹಾಗೂ ತಾತ್ಕಾಲಿಕವಾಗಿ ವಿಜ್ಞಾನ ಮತ್ತು ತಾಂತ್ರಿಕತೆ
13. ಶ್ರೀ| ಕೆ. ರಘುರಾಮಯ್ಯ .... ಕಾಮಗಾರಿ. ವಸತಿ ಹಾಗೂ ಸಂಸದೀಯ ವ್ಯವಹಾರ
14. ಡಾ| ಎಸ್. ಡಿ. ಶರ್ಮಾ .... ಸಂಪರ್ಕ
15. ಶ್ರೀ| ರಾಜಬಹಾದೂರ್ .... ಪ್ರವಾಸೋದ್ಯಮ ಹಾಗೂ ವಿಮಾನಯಾನ
16. ಡಾ| ಕರಣ್‌ಸಿಂಗ್ .... ಆರೋಗ್ಯ ಹಾಗೂ ಕುಟುಂಬ ಯೋಜನೆ
17. ಶ್ರೀ| ಕಮಲಾಪತಿ ತ್ರಿಪಾಠಿ .... ಸಾರಿಗೆ ಮತ್ತು ನೌಕಾಯಾನ

ಸ್ಟೇಟ್ ಸಚಿವರು

1. ಡಿ. ಪಿ. ಚಟ್ಟೋಪಾಧ್ಯಾಯ .... ವಾಣಿಜ್ಯ
2. ಐ. ಕೆ. ಗುಜ್ರಾಲ್ .... ಸುದ್ದಿ ಮತ್ತು ಪ್ರಸಾರ
3. ನೂರುಲ್ ಹಸನ್ .... ಶಿಕ್ಷಣ, ಸಮಾಜಕಲ್ಯಾಣ ಹಾಗೂ ಸಂಸ್ಕೃತಿ

4. ಆರ್. ಕೆ. ಖಾಡಿಲ್ಕರ್ .... ಪೂರೈಕೆ ಮತ್ತು ಪುನರ್ವಸತಿ
5. ಕೆ. ಸಿ. ಪಂತ್ .... ಶಕ್ತಿ
6. ರಘುನಾಥ ರೆಡ್ಡಿ .... ಕಾರ್ಮಿಕ ಹಾಗೂ ಉದ್ಯೋಗ
7. ಚಂದ್ರಜಿತ್ ಯಾದವ್ .... ಉಕ್ಕು ಮತ್ತು ಕೈಗಾರಿಕೆ
8. ನಿತಿರಾಜ ಸಿಂಗ್ ಚೌಧುರಿ .... ಕಾನೂನು, ನ್ಯಾಯ ಹಾಗೂ ಕಂಪೆನಿ ವ್ಯವಹಾರ
9. ಮೋಹನ ಧಾರಿಯಾ .... ಕಾಮಗಾರಿ ಮತ್ತು ವಸತಿ
10. ಕೆ. ಆರ್. ಗಣೇಶ್ ... ಪೆಟ್ರೋಲಿಯಂ ಹಾಗೂ ರಾಸಾಯನಿಕ
11. ಎ. ಸಿ. ಜಾರ್ಜ್ .... ಕೈಗಾರಿಕೆ ಮತ್ತು ನಾಗರಿಕ ಪೂರೈಕೆ
12. ಶಾನವಾಜ್ ಖಾನ್ .... ಕೃಷಿ ಮತ್ತು ನೀರಾವರಿ
13. ಡಾ| ಸರೋಜಿನಿ ಮಹಿಷಿ .... ಕಾನೂನು, ನ್ಯಾಯ ಹಾಗೂ ಕಂಪೆನಿ ವ್ಯವಹಾರ
14. ಬಿ. ಪಿ. ಮೌರ್ಯ .... ಕೈಗಾರಿಕೆ ಮತ್ತು ನಾಗರಿಕ ಪೂರೈಕೆ
15. ಓಂ ಮೆಹ್ತಾ .... ಗೃಹ, ಸಿಬಂದಿ ಹಾಗೂ ಸಂಸದೀಯ ವ್ಯವಹಾರ
16. ಆರ್. ಎನ್. ಮಿರ್ಧಾ .... ರಕ್ಷಣಾ ಉತ್ಪಾದನೆ
17. ಪಿ. ಕೆ. ಮುಖರ್ಜಿ .... ಅರ್ಥ
18. ಮಹಮ್ಮದ್ ಶಫಿ ಕುರೇಶಿ .... ರೈಲ್ವೇ
19. ಎ. ಪಿ. ಶರ್ಮಾ .... ಕೈಗಾರಿಕೆ ಮತ್ತು ನಾಗರಿಕ ಪೂರೈಕೆ
20. ಎ. ಪಿ. ಶಿಂಧೆ .... ಕೃಷಿ ಮತ್ತು ನೀರಾವರಿ
21. ವಿ. ಸಿ. ಶುಕ್ಲಾ .... ಯೋಜನೆ
22. ಸುರೇಂದ್ರಪಾಲ್ ಸಿಂಗ್ .... ಪ್ರವಾಸೋದ್ಯಮ, ವಿಮಾನಯಾನ

ಉಪ ಸಚಿವರು

1. ಜಡ್. ಆರ್. ಅನ್ಸಾರಿ .... ಕೈಗಾರಿಕೆ, ನಾಗರಿಕ ಪೂರೈಕೆ
2. ವೇದವ್ರತ ಬರುವಾ .... ಕಾನೂನು, ನ್ಯಾಯ ಹಾಗೂ ಕಂಪೆನಿ ವ್ಯವಹಾರ
3. ಎ. ಕೆ. ಎಂ. ಇಶಾಕ್ .... ಆರೋಗ್ಯ ಹಾಗೂ ಕುಟುಂಬ ಯೋಜನೆ
4. ಚೈತನ್ಯ ಪ್ರಸಾದ್ ಮಾಝಿ .... ಪೆಟ್ರೋಲಿಯಂ ಹಾಗೂ ರಾಸಾಯನಿಕ
5. ಎಫ್. ಎಚ್. ಮೊಹ್ಸಿನ್ .... ಗೃಹ ವ್ಯವಹಾರ
6. ಅರವಿಂದ ನೇತಂ .... ಶಿಕ್ಷಣ, ಸಮಾಜಕಲ್ಯಾಣ ಹಾಗೂ ಸಂಸ್ಕೃತಿ
7. ಜಗನ್ನಾಥ ಪಹಾಡಿಯಾ .... ಸಂಪರ್ಕ
8. ಜೆ. ಬಿ. ಪಟ್ನಾಯಕ್ .... ರಕ್ಷಣೆ
9. ಸಿದ್ಧೇಶ್ವರ ಪ್ರಸಾದ್ .... ಶಕ್ತಿ
10. ಸುಶೀಲಾ ರೋಹಟ್ಗಿ .... ಅರ್ಥ
11. ಶಂಕರಾನಂದ .... ಸಂಸದೀಯ ವ್ಯವಹಾರ
12. ಬೂಟಾ ಸಿಂಗ್ .... ರೈಲ್ವೇ
13. ದಲಬೀರ್ ಸಿಂಗ್ .... ಕಾಮಗಾರಿ ಮತ್ತು ವಸತಿ
14. ಕೇದಾರನಾಥ ಸಿಂಗ್ .... ಕೃಷಿ ಮತ್ತು ನೀರಾವರಿ
15. ವಿಶ್ವನಾಥ್ ಪ್ರತಾಪ್ ಸಿಂಗ್ .... ವಾಣಿಜ್ಯ
16. ಧರ್ಮವೀರ ಸಿನ್ಹಾ .... ಸುದ್ದಿ ಮತ್ತು ಪ್ರಸಾರ
17. ಜಿ. ವೆಂಕಟಸ್ವಾಮಿ .... ಪೂರೈಕೆ ಮತ್ತು ಪುನರ್ವಸತಿ
18. ಬಲಗೋವಿಂದ ವರ್ಮಾ .... ಕಾರ್ಮಿಕ
19. ಡಿ. ಪಿ. ಯಾದವ್ .... ಶಿಕ್ಷಣ, ಸಮಾಜಕಲ್ಯಾಣ ಮತ್ತು ಸಂಸ್ಕೃತಿ
20. ಸುಖದೇವ ಪ್ರಸಾದ್ .... ಉಕ್ಕು ಮತ್ತು ಗಣಿ
21. ಬಿಪಿನ್‌ಪಾಲಾ ದಾಸ್ .... ವಿದೇಶ ವ್ಯವಹಾರ.

———

ಕರ್ನಾಟಕ ರಾಜ್ಯದಲ್ಲಿ ಕಣ್ಣುಗುಡ್ಡೆಗಳ ಬ್ಯಾಂಕ್

ಲೇ: ಡಾ। ಡಿ. ಚಾಮರಾಜ, ವೈಸ್ ಡೀನ್, ಮಿಂಟೋ ಆಸ್ಪತ್ರೆ, ಬೆಂಗಳೂರು.

ಕಣ್ಣುಗುಡ್ಡೆಗಳ ಕಸಿಗೆ ಸಂಬಂಧಿಸಿದ ಕರ್ನಾಟಕ ರಾಜ್ಯದ 1965ರ ಕಾನೂನು 1970ರ ಏಪ್ರಿಲ್ ಒಂದರಂದು ಜಾರಿಗೆ ಬಂದಿತು. ಸತ್ತವರ ಕಣ್ಣುಗಳನ್ನು, ಶಸ್ತ್ರಚಿಕಿತ್ಸೆಯ ಮೂಲಕ ಬೇರೆಯವರ ಕಣ್ಣುಗಳಿಗೆ ಅಳವಡಿಸುವುದು ಈ ಕಾನೂನಿನ ಉದ್ದೇಶ.

ಕಣ್ಣುಗುಡ್ಡೆ ಪಾರದರ್ಶಕವಾದ ಒಂದು ಪ್ರಕಾಶಮಾನವಾದ ವಸ್ತು. ಕಣ್ಣಿನ ಮುಂದಿನ ಭಾಗವನ್ನು ಗಡಿಯಾರದ ಗಾಜು ಮುಚ್ಚಿರುವಂತೆ ಮುಚ್ಚಿರುತ್ತದೆ. ಕೆಲವು ರೋಗಗಳು ಮತ್ತು ಗಾಯಗಳಿಂದ ಇದು ಮಸುಕಾಗಿ ಕಣ್ಣಿನ ದೃಷ್ಟಿ ಹೋಗುತ್ತದೆ. ಕಣ್ಣಿನ ಉಳಿದ ಭಾಗ ಮತ್ತು ಬೆಳಕಿನ ನೋಟದ ನರಗಳು ಆರೋಗ್ಯವಾಗಿದ್ದರೆ, ಮಸುಕಾದ ಕಣ್ಣುಗುಡ್ಡೆಯನ್ನು ತೆಗೆದು, ದಾನಪಡೆದ ಕಣ್ಣಿನ ಉತ್ತಮ ಕಣ್ಣುಗುಡ್ಡೆಯನ್ನು ಅಲ್ಲಿ ಅಳವಡಿಸಿ ದೃಷ್ಟಿಯನ್ನು ಸರಿಮಾಡಬಹುದು. ಈ ಶಸ್ತ್ರಚಿಕಿತ್ಸೆಯನ್ನು ಕಣ್ಣುಗುಡ್ಡೆ ಕಸಿ ಮಾಡುವ ಶಸ್ತ್ರಚಿಕಿತ್ಸೆ ಎಂದು ಹೇಳುತ್ತಾರೆ. ಕಣ್ಣಿನ ಬ್ಯಾಂಕ್ ಕಣ್ಣುಗುಡ್ಡೆಗಳನ್ನು ಸಾಮಾನ್ಯವಾಗಿ ಮೂರು ಕಡೆಗಳಿಂದ ಪಡೆಯುತ್ತದೆ. ಸತ್ತವರ ಕಣ್ಣುಗಳನ್ನು ಸಂಬಂಧಿಗಳು ದಾನ ನೀಡುವುದರಿಂದ; ಕೆಲವು ಸಂಸ್ಥೆಗಳಿಂದ ಬರುವ ವಾರಸುದಾರರಿಲ್ಲದ ದೇಹಗಳಿಂದ ತೆಗೆದ ಕಣ್ಣುಗಳು; ಸ್ವಯಂ ಪ್ರೇರಣೆಯಿಂದ ದಾನಿಗಳು ಕಣ್ಣುಗಳನ್ನು ದಾನ ಮಾಡಿದಾಗ, ಇವುಗಳನ್ನು ಪಡೆಯಲಾಗುತ್ತದೆ.

ಕಣ್ಣುಗಳ ಶೇಖರಣೆ, ಸರಿಪಡಿಸುವಿಕೆ, ಹಾಗೂ ಹಂಚುವಿಕೆ ಕಣ್ಣಿನ ಬ್ಯಾಂಕ್‌ನ ಉದ್ದೇಶ. ಮನುಷ್ಯ ಸತ್ತ ಆರು ಘಂಟೆಗಳಲ್ಲಿ ಕಣ್ಣುಗಳನ್ನು ತೆಗೆಯ ಬೇಕಾಗುವುದರಿಂದ ಸತ್ತವರ ಕಣ್ಣುಗಳನ್ನು ದಾನ ಮಾಡುವವರು ಈ ಕಣ್ಣುಗಳ ನಿಧಿಯ ಕೇಂದ್ರಕ್ಕೆ ಟೆಲಿಫೋನ್ ಮಾಡಿ, ಕೂಡಲೇ ತಿಳಿಸಬೇಕು. ಆಗ ಈ ಕೇಂದ್ರವು ಅದನ್ನು ಶೇಖರಿಸುವ ಕೆಲಸವನ್ನು ನೇರವಾಗಿ ಮಾಡುವುದು.

ಕಣ್ಣಿನ ಗುಡ್ಡೆಗಳ ಸಂಗ್ರಹ

ಕಣ್ಣುಗುಡ್ಡೆಗಳಿಗೆ ಸಂಬಂಧಿಸಿದ ಕಾನೂನಿನ (4ನೇ ಕಲಂನ ಪ್ರಕಾರ) ಆಸ್ಪತ್ರೆ ಜೈಲು, ಮುಂತಾದ ಆಡಳಿತ ವರ್ಗದಲ್ಲಿನ ಮುಖ್ಯಸ್ಥರು ವಾರಸುದಾರರಿಲ್ಲದ ದೇಹಗಳಿಂದ ಕಣ್ಣುಗಳನ್ನು ತೆಗೆಯಲು ಅರ್ಹತೆ ನೀಡಬಹುದು.

ಥರ್ಮಾಸ್ ಫ್ಲಾಸ್ಕ್‌ನಲ್ಲಿ ಮಂಜಿನಿಂದ ಮುಚ್ಚಿರುವ ಕಣ್ಣುಗಳನ್ನು, ದೇಹದಿಂದ ಕಳಚಿದ ಹನ್ನೆರಡು ಘಂಟೆಯೊಳಗಾಗಿ ಕೇಂದ್ರಗಳಿಗೆ ತಲುಪಬೇಕು.

ದಾನಿಗಳ ಕಣ್ಣುಗಳನ್ನು ಹಂಚಲು ಕೇಂದ್ರ ಹಾಗೂ ಸಾರಿಗೆ ವ್ಯವಸ್ಥೆಗಳಿಗೆ ನಿಕಟ ಸಂಬಂಧ ಇರಬೇಕು. ಏಕೆಂದರೆ ದಾನಿಯಿಂದ ಕಣ್ಣನ್ನು ಪಡೆದ ಎರಡು ದಿನಗಳಲ್ಲಿ ಕಣ್ಣುಗುಡ್ಡೆಯನ್ನು ಉಪಯೋಗಿಸಬೇಕು. ಅಮೆರಿಕ ದೇಶದಲ್ಲಿ ವಿಮಾನ ಸಾರಿಗೆಯವರು ಥರ್ಮಾಸ್ ಫ್ಲಾಸ್ಕಿನಲ್ಲಿ ಶೇಖರಿಸಿಟ್ಟ ಕಣ್ಣುಗಳನ್ನು ಪುಕ್ಕಟೆಯಾಗಿ ಸಾಗಿಸಲು ವ್ಯವಸ್ಥೆ ಮಾಡಿರುತ್ತಾರೆ.

ಈ ಕಣ್ಣಿನ ಪಾರದರ್ಶಕ ಪಟಲದ ಕಸಿ ಮಾಡುವ ಶಸ್ತ್ರಚಿಕಿತ್ಸೆಯನ್ನು ಬೆಂಗಳೂರಿನ ಮಿಂಟೋ ಕಣ್ಣಿನ ಆಸ್ಪತ್ರೆ ಕೆಲವು ವರ್ಷಗಳ ಹಿಂದೆ ಪ್ರಾರಂಭಿಸಿತು. ಸರ್ಕಾರವು ಕಣ್ಣಿನ ಕೇಂದ್ರವನ್ನು 1970ರಲ್ಲಿ ಈ ಆಸ್ಪತ್ರೆ ಮತ್ತು ಹುಬ್ಬಳ್ಳಿಯಲ್ಲಿ ಕೆ. ಎಂ. ಸಿ. ಆಸ್ಪತ್ರೆಯಲ್ಲಿ ಸ್ಥಾಪಿಸಲು ಅನುಮತಿ ನೀಡಿತು. ಇವೆರಡಲ್ಲದೆ ಬೆಂಗಳೂರಿನ ಸೈಂಟ್ ಮಾರ್ಥಾಸ್ ಆಸ್ಪತ್ರೆಯೂ ಈ ಕಾಯಿದೆಯ ಅನುಮತಿಗೆ ಒಳಪಟ್ಟಿದೆ. ಅನೇಕ ಜನರು ತಮ್ಮ ಹೆಸರನ್ನು ಕಣ್ಣಿನ ದಾನಿಗಳೆಂದು ದಾಖಲೆ ಮಾಡಿಸಿದ್ದಾರೆ.

ಶಸ್ತ್ರಚಿಕಿತ್ಸೆಯಿಂದ ಪ್ರಯೋಜನ ಪಡೆಯಬಹುದಾದ ರೋಗಿಗಳು ಇನ್ನೂ ಅನೇಕ ಸಂಖ್ಯೆಯಲ್ಲಿದ್ದಾರೆ.

ರೋಗಿ ಇದ್ದಾಗ ದಾನಿಗಳ ಕಣ್ಣುಗಳಿರುವುದಿಲ್ಲ. ದಾನಿಗಳ ಕಣ್ಣುಗಳು ಇದ್ದಾಗ ಹೇಳಿಕಳುಹಿಸಿದರೂ ರೋಗಿ ಬರುವುದಿಲ್ಲ. ಇದು ನಾವು ಎದುರಿಸುತ್ತಿರುವ ಸಮಸ್ಯೆ. ಈ ಸಮಸ್ಯೆಯನ್ನು ಪರಿಹರಿಸಲು ಕಣ್ಣುಗುಡ್ಡೆಗಳು ಅವಶ್ಯಕವಿದ್ದಾಗ ದೊರೆಯಬೇಕು. ಈ ಗುಡ್ಡೆಗಳ ಅವಶ್ಯವಿದ್ದಲ್ಲಿಗೆ ಬೇಗನೆ ತಲುಪಲು ಏರ್ಪಾಡುಗಳಿರಬೇಕು. ದಾನಿಗಳು ಕಣ್ಣಿನ ರವಾನೆಗಾಗಲೀ, ರೋಗಿ ಹೋಗಿ ಬರಲಿಕ್ಕಾಗಲೀ ಶೀಘ್ರವಾದ ಸಾರಿಗೆ ವ್ಯವಸ್ಥೆ ಅತ್ಯವಶ್ಯಕ.

ತಪ್ಪುಭಾವನೆಗಳ ನಿವಾರಣೆ

ಸಾರ್ವಜನಿಕರ ಕೆಲವು ತಪ್ಪು ಭಾವನೆ ಇವೆ. ಕೆಲವರು ಕಣ್ಣುಗಳ ಗುಡ್ಡೆಗಳನ್ನೇ ಹಾಕುತ್ತಾರೆ ಎಂದು ತಿಳಿದಿದ್ದಾರೆ. ಆದರೆ ಪ್ರಪಂಚದಲ್ಲಿ ಎಲ್ಲೂ ಇದನ್ನೂ ಸಾಧಿಸಿಲ್ಲ. ಈ ದಿಸೆಯಲ್ಲಿ ಇನ್ನೂ ಸಂಶೋಧನೆಯ ಪ್ರಗತಿ ಆಗುತ್ತಿದೆ. ಕಣ್ಣುಗಳನ್ನು ಕೊಂಡುಕೊಳ್ಳುವುದಾಗಲೀ ಮಾರುವುದಾಗಲೀ ಇಲ್ಲ. ಅವುಗಳನ್ನು ಪುಕ್ಕಟೆಯಾಗಿ ಕಣ್ಣಿನ ತಜ್ಞರಿಗೆ ಒದಗಿಸಲಾಗುತ್ತಿದೆ.

ಯಾವ ವಯಸ್ಸಿನ ವ್ಯಕ್ತಿಯ ಕಣ್ಣಾದರೂ ಉಪಯೋಗಕ್ಕೆ ಬರುತ್ತದೆ. ಒಪರೇಷನ್ ಆದ ಕಣ್ಣುಗಳೂ ಸಹ ಉಪಯೋಗಕ್ಕೆ ಬರುತ್ತವೆ. ಕಣ್ಣನ್ನು ಕಳಚುವುದರಿಂದ ದೇಹದ ರೂಪಿಗೇನು ಕುಂದಾಗುವುದಿಲ್ಲ. ಎಲ್ಲಾ ಧರ್ಮಗಳೂ ಸತ್ತ ಮೇಲೂ ಸಹ ಮನುಷ್ಯ ಸೇವೆ ಮಾಡುವುದನ್ನು ಬೋಧಿಸುತ್ತವೆ. ಕಣ್ಣಿನ ದಾನ ಮಾಡಿದರೆ ಮನುಷ್ಯ ಸತ್ತ ಮೇಲೂ ಸಹ ಮಾನವನ ಸೇವೆಯನ್ನು ಮಾಡಿದಂತಾಗುತ್ತದೆ. ಇದನ್ನು ದಾನ ಮಾಡಲು ಏನೂ ಖರ್ಚಿಲ್ಲ. ಆದರೆ ಬೇರೆಯೊಬ್ಬರು ಮತ್ತೆ ದೃಷ್ಟಿಯನ್ನು ಹೊಂದುವುದಕ್ಕೆ ಸಹಾಯ ಮಾಡಿದಂತಾಗುತ್ತದೆ.

ಸರ್ಕಾರ ಮತ್ತು ಶಾಸಕರು ಕಾನೂನು ಮಾಡಿ ತಮ್ಮ ಭಾಗದ ಕಾರ್ಯವನ್ನು ಪೂರೈಸಿದ್ದಾರೆ. ಈ ಕಾಯಿದೆಯನ್ನು ಮಾನವರಿಗೆ ಉಪಯೋಗವಾಗುವಂತೆ ಮಾಡಲು ಸಮಾಜ ಬೇಗ ಮುಂದೆ ಬರಬೇಕು.

(ಆಕಾಶವಾಣಿ ಸೌಜನ್ಯದಿಂದ.)

— —



ಯಾಂತ್ರೀಕೃತ ಸೈಕಲ್ ರಿಕ್ಷಾ

ದುರ್ಗಾಪುರದ ಕೇಂದ್ರ ಮೆಕಾನಿಕಲ್ ಎಂಜಿನಿಯರಿಂಗ್ ಸಂಶೋಧನಾ ಕೇಂದ್ರವು, ಯಾಂತ್ರೀಕೃತ ಸೈಕಲ್ ರಿಕ್ಷಾವನ್ನು ರೂಪಿಸಿ, ಅಭಿವೃದ್ಧಿ ಪಡಿಸಿದ್ದು, ಅದು ಒಂದು ಲೀಟರ್ ಪೆಟ್ರೋಲ್‌ಗೆ 30 ಕಿ. ಮೀ. ದೂರ ಓಡಲಿದೆ. ಬ್ರೇಕ್ ಹಾಕಿದ ಮೇಲೆ ಎಂಟು ಮೀಟರುಗಳ ದೂರದಲ್ಲೆ ನಿಲ್ಲುತ್ತದೆ. ಇದರಲ್ಲಿ ಇಬ್ಬರು ಕುಳಿತು ಪ್ರಯಾಣಮಾಡಬಹುದು. ರಿಕ್ಷಾ ಸಮರ್ಥವಾಗಿದ್ದು, ಗಂಟೆಗೆ 35 ಕಿ. ಮೀ. ವೇಗದಲ್ಲಿದ್ದರೂ ಕೂಡಾ ಹತೋಟಿ ತಪ್ಪುವುದಿಲ್ಲ. ಅದರಲ್ಲೂ ನಗರಗಳ ಸಾರಿಗೆಗೆ ಅತ್ಯುತ್ತಮವೆಂದು ಕಂಡುಬಂದಿದೆ. ಪೆಡಲ್‌ಗಳ ಸಹಾಯವಿಲ್ಲದೆ ಈ ವಾಹನವು ಇಬ್ಬರು ಪ್ರಯಾಣಿಕರನ್ನು ಸಾಗಿಸಬಲ್ಲದು. ಸಾಮಾನ್ಯ ರೀತಿಯ ಸೈಕಲ್ ರಿಕ್ಷಾಕ್ಕೆ ಹೆಚ್ಚು ಬದಲಾವಣೆಗಳಿಲ್ಲದೆ, ವಿಜ್ಞಾನಿಗಳು ಸಣ್ಣ ಪೆಟ್ರೋಲ್ ಎಂಜಿನನ್ನು ಅಳವಡಿಸಿದ್ದಾರೆ.

— —

ರೈಲ್ವೆ ಪ್ರಯಾಣಿಕರು ಹಾಗೂ ಸರಕುಸಾಗಣೆಯಲ್ಲಿ ಇಳಿತ

ಈ ವರ್ಷ ಎಪ್ರಿಲ್–ಜುಲೈ ಅವಧಿಯಲ್ಲಿ ರೈಲ್ವೆ ಪ್ರಯಾಣಿಕರ ಸಂಖ್ಯೆ ಕಳೆದ ವರ್ಷ ಇದೇ ಅವಧಿಗಿಂತ ಶೇಕಡ 19·6 ರಷ್ಟು, ಬಜೆಟ್ ಗುರಿಗಿಂತ ಶೇಕಡ 22·6 ರಷ್ಟು ಕಡಿಮೆಯಾಗಿತ್ತು. ಇದೇ ಜುಲೈನಲ್ಲಿ ರೈಲ್ವೆ ಪ್ರಯಾಣಿಕರ ಸಂಖ್ಯೆ ಕಳೆದ ವರ್ಷದ ಇದೇ ಮಾಸದಲ್ಲಿ ಪ್ರಯಾಣಿಕರಿಗಿಂತ ಶೇ. 10·5 ರಷ್ಟು ಕಡಿಮೆಯಾಗಿತ್ತು. ಈ ವರ್ಷ ಎಪ್ರಿಲ್–ಜುಲೈ ಅವಧಿಯಲ್ಲಿ ರೈಲ್ವೆಯು ಸಾಗಿಸಿದ 5·12 ಕೋಟಿ ಟನ್ ಸರಕುಗಳು ಕಳೆದವರ್ಷ ಇದೇ ಅವಧಿಯಲ್ಲಿ ಸಾಗಿಸಿದ ಸರಕಿಗಿಂತ 44·1 ಲಕ್ಷ ಟನ್ ಹಾಗೂ ಬಜೆಟ್ ಗುರಿಗಿಂತ 1·40 ಕೋಟಿ ಟನ್ ಕಡಿಮೆಯಾಗಿತ್ತು. ಇದೇ ಜುಲೈನಲ್ಲಿ 1·41 ಕೋಟಿ ಟನ್ ಸರಕುಗಳನ್ನು ಸಾಗಿಸಲಾಯಿತು. ಇದು ಕಳೆದವರ್ಷ ಜುಲೈನಲ್ಲಿ ಸಾಗಿಸಿದ ಸರಕಿಗಿಂತ 40 ಸಹಸ್ರ ಟನ್ ಹಾಗೂ ಬಜೆಟ್ ಗುರಿಗಿಂತ 24·8 ಲಕ್ಷ ಕಡಿಮೆಯಾಗಿತ್ತು.

— —

ಮೊಟ್ಟಮೊದಲ ಉಪಗ್ರಹ ಪ್ರಯೋಗಕ್ಕೆ ಸಿದ್ಧತೆಗಳು

ಭಾರತದ ಮೊಟ್ಟಮೊದಲನೆಯ ವೈಜ್ಞಾನಿಕ ಉಪಗ್ರಹದ ಪ್ರಯೋಗ ಸಂಬಂಧವಾಗಿ ಸಮಗ್ರ ಸಿದ್ಧತೆಗಳು ಪ್ರಗತಿಪರವಾಗಿ ನಡೆದಿವೆ.

ಕ್ಷ–ಕಿರಣ ಪ್ರಯೋಗವು, ಆಕಾಶಕಾಯಗಳ ವಿವಿಧ ಶ್ರೇಣಿಮೂಲಗಳಲ್ಲಿ ಕ್ಷ–ಕಿರಣಗಳನ್ನು ಪತ್ತೆಹಚ್ಚುವ ಮತ್ತು ಅಳೆಯುವ ಉದ್ದೇಶವನ್ನು ಸಾಧಿಸಲಿದೆ. ಇದಕ್ಕಾಗಿ ದೂರದರ್ಶಕಗಳನ್ನು ಅಳವಡಿಸಲಾಗಿದ್ದು, ಅವುಗಳು ತಮ್ಮ ಮೂಲಗಳನ್ನೂ ಹಾಗೂ ಅವುಗಳ ಕಾಲ ಮತ್ತು ತೀವ್ರತೆಗಳನ್ನು ಅಳೆಯುವಂತೆ ರೂಪಿಸಲಾಗಿದೆ.

— —

PRABHAT, KANNADA WEEKLY, MANGALORE-575001
REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.